**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**

**ದಕ್ಷಿಣ ಕನ್ನಡ, ಮಂಗಳೂರು**

**ಸ್ಪೆಷಲ್ ಕೇಸ್ ನಂಬ್ರ 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಶ್ ಎಸ್. | ಚಾಸಾಃ 31 |
| ತಂದೆಯ ಹೆಸರು | : | ಶ್ರೀನಿವಾಸ್ | ಫ್ರಾಸಾಃ 16 |
| ಪ್ರಾಯ | : | 33 ವರ್ಷ | ದಿನಾಂಕಃ 12.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿ.ಸಿ. 851, ಸಂಚಾರ ಪೂರ್ವ ಪೊಲೀಸ್ ಠಾಣೆ, ಮಂಗಳೂರು | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2021 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 4.07.2021 ರಂದು ಚಾಸಾ-38 ರವರು ಈ ಪ್ರಕರಣದ ಸ್ವತ್ತುಗಳಾದ ಎಲ್.ಎಸ್.ಡಿ. ಎಂದು ಬರೆದ ಪ್ಯಾಕ್ ಮತ್ತು ಸೀಲು ಮಾಡಿದ ಸ್ವತ್ತನ್ನು FSL ಬೆಂಗಳೂರಿಗೆ ತಲುಪಿಸಬೇಕೆಂದು ಆದೇಶ ಮಾಡಿದ್ದರ ಮೇರೆಗೆ ಆ ಪ್ರಕಾರ ನಾನು ದಿಃ 5.07.2021 ರಂದು ಸದರಿ ಸ್ವತ್ತುಗಳನ್ನು FSL ಬೆಂಗಳೂರಿಗೆ ತಲುಪಿಸಿ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಚಾಸಾ-38 ರವರ ಮುಂದೆ ಹಾಜರುಪಡಿಸಿದ್ದೇನೆ. ಸದರಿ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ 43 ಎಂದು ಗುರುತಿಸಲಾಯಿತು.

3. ನಾನು ತೆಗೆದುಕೊಂಡು ಹೋದ ಪ್ಯಾಕೆಟ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು ಸಂ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ. ಎಂ. ಜೆ. ವಕೀಲರಿಂದ ಶ್ರೀ ವಿ.ಆರ್.ಎ. ವಕೀಲರ ಪರವಾಗಿಃ**

4. ಈ ಪ್ರಕರಣಕ್ಕೆ ಸಂಬಂಧಪಟ್ಟ ಯಾವುದೇ ವಸ್ತುಗಳನ್ನು FSL, Bengaluru ಗೆ

ತೆಗೆದುಕೊಂಡು ಹೋಗಿ ಕೊಟ್ಟಿರುವುದಿಲ್ಲ ಮತ್ತು ಅವರಿಂದ ಸ್ವೀಕೃತಿ ಪತ್ರವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓದಿ ಹೇಳಿ ಕೇಳಿ ಸರಿ ಇದೆ.**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.